ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಇಲಾಖೆಯಿಂದ ರಾಜ್ಯದಲ್ಲಿ ಸರ್ಕಾರದ ಕೈಗಾರಿಕಾ ಕೇಂದ್ರಗಳಲ್ಲಿ ಖಾಸಗಿ ವಲಯದವರ ಸಹಕಾರದಿಂದ ಸರ್ಕಾರದ ಸವಲತ್ತುಗಳನ್ನು ವೃದ್ಧಿಸಿ ಅವರಿಗೆ ತರಬೇತಿ ಕೊಡುವ ಸರ್ಕಾರದ ಯೋಜನೆಗಳು ಯಾವುದೂ ಇಲ್ಲ.

ಆ) ಉದ್ಭವಿಸುವುದಿಲ್ಲ.

ಗಿರಿಜನರಿಗೆ ವಿದ್ಯುತ್ ಮತ್ತು ರಸ್ತೆ ವ್ಯವಸ್ಥೆ

4780 - ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ನೆರಿಯ ಗ್ರಾಮದ ಕೊಲೋಡಿ ಗಿರಿಜನರಿಗೆ ವಿದ್ಯುತ್ ಹಾಗೂ ರಸ್ತೆ ಸಂಪರ್ಕ ಅವ್ಯವಸ್ಥಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಈ ಕಾಲೋನಿಗೆ ವಿದ್ಯುತ್ ಸಂಪರ್ಕ ಒದಗಿಸುವ ಬಗ್ಗೆ 1996-97ನೇ ಸಾಲಿನಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿ, ಸದರಿ ಲೈನ್ ಎಸ್ಟಿಮೇಟ್‌ಗೆ ಮಂಜೂರು ಆಗಿರುತ್ತದೆ. ಈ ವಿದ್ಯುತ್ ಸಂಪರ್ಕಕ್ಕಾಗಿ ಖಾಸಗೀ ಜಮೀನಿನಲ್ಲಿ ವಿದ್ಯುತ್ ಲೈನ್ ಹಾದುಹೋಗಬೇಕಾಗಿರುವ ಪ್ರಯುಕ್ತ ಖಾಸಗಿ ಜಮೀನನ್ನು ಸ್ವಾದೀನಪಡಿಸಿಕೊಳ್ಳಲು ಅಂದಾಜು ವೆಚ್ಚ ತಯಾರಿಸುವ ಕಾರ್ಯ ಪ್ರಗತಿಯಲ್ಲಿದ್ದು, ಭೂಸ್ವಾಧೀನದ ನಂತರ ವಿದ್ಯುತ್ ರಸ್ತೆ ಸಂಪರ್ಕ ಕಲ್ಪಿಸಲಾಗುವುದು.

ಕೆ.ಎಸ್.ಎಸ್.ಐ.ಡಿ.ಸಿ.ಯಿಂದ ಸಾಲ

4782 - ಶ್ರೀ ರಾಮದಾಸ್ ವಿ. (ಕೃಷ್ಣರಾಜ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಎಸ್.ಎಸ್.ಐ.ಡಿ.ಸಿ. ಯಿಂದ ಕಳೆದ 3 ವರ್ಷಗಳಲ್ಲಿ ಎಷ್ಟು ಸಾಲ ನೀಡಲಾಗಿದೆ? ಹತ್ತು ಲಕ್ಷ ರೂ.ಗಳಿಗಿಂತ ಹೆಚ್ಚು ಮೊತ್ತದ ಸಾಲದ ವಿವರಣೆ ನೀಡುವುದು?

ಆ) ಕಳೆದ ವರ್ಷಗಳಲ್ಲಿ ಎಷ್ಟು ಸಾಲ ಮರುಪಾವತಿ ಆಗಿದೆ?

ಇ) ಪ್ಲೋರಿಕಲ್ಚರ್ ಉದ್ಯಮಕ್ಕೆ ಎಷ್ಟು ಸಾಲ ನೀಡಲಾಗಿದೆ? ಮರುಪಾವತಿ ಪ್ರಮಾಣ ಎಷ್ಟು?

ಈ) ಸಾಲದ ಮರುಪಾವತಿ ಮಾಡದವರ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಉ) ಪ್ಲೋರಿಕಲ್ಚರ್‌ಗೆ ಈಗ ಸಾಲ ನೀಡುವುದನ್ನು ನಿಲ್ಲಿಸಲಾಗಿದೆಯೆ? ಹಾಗಿದ್ದಲ್ಲಿ ಕಾರಣಗಳೇನು?

ಊ) ಕೆ.ಎಸ್.ಎಸ್.ಐ.ಡಿ.ಸಿ.ಯ ಸಹಕಾರದಿಂದ ಪ್ರಾರಂಭವಾದ ಎಷ್ಟು ಕೈಗಾರಿಕೆಗಳು ಲಾಭದಾಯಕವಾಗಿದೆ? ಎಷ್ಟು ಆರೋಗ್ಯಕರವಾಗಿ ಕೆಲಸ ನಿರ್ವಹಿಸುತ್ತಿದೆ? ಎಷ್ಟು ಉದ್ಯೋಗಾವಕಾಶ ಲಭಿಸಿದೆ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ(ನಿ)ದಲ್ಲಿ ಸಾಲ ಕೊಡುವ ಯೋಜನೆಗಳಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ(ನಿ)ವು ಕೈಗಾರಿಕಾ ವಸಾಹತುಗಳನ್ನು ಅಭಿವೃದ್ಧಿಪಡಿಸಿ ನಿವೇಶನ/ಮಳಿಗೆಗಳನ್ನು ಹಂಚಿಕೆ ಮಾಡುತ್ತಿದೆ. ಈವರೆಗೆ 8621 ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗಿದೆ.

ಮಹಾನಗರ ಪಾಲಿಕೆಯ ಫುಟ್‌ಪಾತ್ ಅಕ್ರಮ

4783 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮಹಾನಗರ ಪಾಲಿಕೆಯಿಂದ ಫುಟ್‌ಪಾತ್ ಜಾಗಗಳನ್ನು ಲೀಸ್‌ಗೆ ನೀಡಲಾಗಿದೆಯೇ?

ಆ) ಇಂಥಹಾ ಎಷ್ಟು ಪ್ರಕರಣ ಇವೆ? ಯಾರು ಯಾರಿಗೆ ಯಾವಾಗಿನಿಂದ ಈ ರೀತಿ ಪರವಾನಗಿ ನೀಡಲಾಗಿದೆ?

ಇ) ಈ ಫುಟ್‌ಪಾತ್ ಅಂಗಡಿಗಳಿಗೆ ನಗರಪಾಲಿಕೆಯಿಂದ ಲೈಸೆನ್ಸ್ ನೀಡಲಾಗಿತ್ತೇ? ಈ ರೀತಿ ಫುಟ್‌ಪಾತ್ ಅಕ್ರಮ ಮತ್ತು ಇದಕ್ಕೆ ಲೈಸೆನ್ಸ್ ನೀಡುವುದು ಸರ್ವೋಚ್ಚ ನ್ಯಾಯಾಲಯದ ಆಜ್ಞೆಗೆ ವಿರುದ್ಧವಲ್ಲವೆ?

ಈ) ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?